ಇಂದು ದಿಃ **06-07-2024** ರಂದು ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಶ್ರೀ ಬಿ.ಎಂ.ಎಸ್ ವಕೀಲರಿಂದ ವಾದಿಗಳ ಪರಃ**

ನಾನು ಎಂ.ಬಿ.ಎ ಪದವೀಧರ ಇರುತ್ತೇನೆ. ನಾನು 5 ನೇ ತರಗತಿಯವರೆಗೆ ಸರ್ಕಾರಿ ಶಾಲೆಯಲ್ಲಿ ನಂತರ, ಖಾಸಗೀ ಶಾಲೆ ಮತ್ತು ಕಾಲೇಜ್ ನಲ್ಲಿ ನನ್ನ ಶಿಕ್ಷಣ ಪೂರೈಯಿಸಿರುತ್ತೇನೆ. ನನ್ನ ಸಹೋದರ ಜಗದೀಶ್ ಸಹ ಖಾಸಗೀ ಕಾಲೇಜ್ ನಲ್ಲಿ ಓದಿದ್ದು ಎಂದರೆ ಸರಿ. ನನ್ನ ಸಹೋದರಿ ಆಶಾ ಸಹ ಖಾಸಗೀ ಶಾಲೆ ಮತ್ತು ಕಾಲೇಜ್ ನಲ್ಲಿ ಓದಿರುತ್ತಾಳೆ ಎಂದರೆ ಸರಿ. ನನ್ನ ಮತ್ತು ನನ್ನ ತಮ್ಮನ ಮದುವೆ ಆಗಿಲ್ಲ. ನಾನು, ನನ್ನ ತಂದೆ ತಾಯಿ ಹನಗವಾಡಿಯಲ್ಲಿ ಒಂದೇ ಮನೆಯಲ್ಲಿ ವಾಸ ಇರುತ್ತೇವೆ ಎಂದರೆ ಸರಿ. ಸಾಕ್ಷಿ ಆದರೆ ಅಸ್ತಿಗಳನ್ನು ವಿಭಾಗ ಮಾಡಿಕೊಂಡಿದ್ದೇವೆ ಎಂದು ಹೇಳುತ್ತಾರೆ. 1999 ರಲ್ಲಿ ವಿಭಾಗ ಮಾಡಿಕೊಂಡಿರುತ್ತೇವೆ. ಕೋಡಿಹಳ್ಳಿ ಗ್ರಾಮದ ಜಮೀನನ್ನು ನನ್ನ ತಂದೆ ಒಟ್ಟಿಗೆ ಸಾಗುವಳಿ ಮಾಡುತ್ತಿದ್ದಾರೆ ಎಂದರೆ ಸರಿ. ಸಾಕ್ಷಿ ಈಗ ನನ್ನ ಹೆಸರಿಗೆ ಜಮೀನು ಇಲ್ಲ, ಈಗ ನನ್ನ ತಾಯಿಯ ಹೆಸರಿಗೆ ಇದೆ ಎಂದು ಹೇಳುತ್ತಾರೆ. ನನ್ನ ಜಮೀನನ್ನು ಸಹ ನನ್ನ ತಂದೆಯೇ ಸಾಗುವಳಿ ಮಾಡುತ್ತಿದ್ದರು ಎಂದರೆ ಸಾಕ್ಷಿ ನಾನು ಬೆಂಗಳೂರಿನಲ್ಲಿ ವಾಸ ಇದ್ದ ಕಾರಣ ನನಗೆ ನೋಡಿಕೊಳ್ಳಲು ಆಗುತ್ತಿರಲಿಲ್ಲ, ಆ ಕಾರಣದಿಂದ ಮಾಡುತ್ತಿದ್ದರು ಎಂದು ಹೇಳುತ್ತಾರೆ. ನಿ.ಪಿ-37 ರಲ್ಲಿ ಕಾಣುವ ಬಾಲಕ ನಾನು ಎಂದರೆ ಸರಿ. ಫೋಟೋದಲ್ಲಿ ಹಗ್ಗ ಹಿಡಿದ ವ್ಯಕ್ತಿ ನನ್ನ ಅಜ್ಜ ಎಂದರೆ ಸರಿ. ಸದರಿ ಫೋಟೋ ಯಾರು ತೆಗೆದಿದ್ದಾರೆ ಎಂದು ನನಗೆ ಗೊತ್ತಿಲ್ಲ. ನಿ.ಪಿ-28 ಮತ್ತು 29 ರಲ್ಲಿ ಮುರಿಗೆಪ್ಪ ಇಂದ ಆಶಾ ವರೆಗೆ ಇರುವ ಹೆಸರುಗಳು ಇದ್ದು, ಇವು ನಮ್ಮ ಕುಟುಂಬಕ್ಕೆ ಸಂಬಂಧಿಸಿದವು ಎಂದರೆ ಸರಿ. ಕೋಡಿಹಳ್ಳಿಯ ಜಮೀನನ್ನು ಖರೀದಿ ಮಾಡಿದಾಗ ನನ್ನ ವಯಸ್ಸು ಸುಮಾರು 2 ವರ್ಷ ಇತ್ತು ಎಂದರೆ ಸರಿ. 2 ನೇ ಪ್ರತಿವಾದಿ ಮದುವೆಯಾದಾಗ ನಾನು ಹುಟ್ಟಿರಲಿಲ್ಲ. ಪ್ರತಿವಾದಿ 3 ಮತ್ತು 4 ಇವರು ಮದುವೆಯಾದಾಗ ನಾನು ಸುಮಾರು 9 ವರ್ಷದವನು ಮತ್ತು 5 ನೇ ಪ್ರತಿವಾದಿ

ಮದುವೆಯಾದಾಗ ನಾನು ಸುಮಾರು 17 ವರ್ಷದವನು ಇದ್ದೆನು. ನನ್ನ ಚಿಕ್ಕಪ್ಪ ಗಂಗಾಧರ ಮನೆ ಬಿಟ್ಟು ಹೋಗಿ ಮದುವೆ ಮಾಡಿಕೊಂಡನು ಎಂದರೆ ಸರಿ. ಸಾಕ್ಷಿ ಆತ ನಮ್ಮ ಜೊತೆಗೆ ಇರಲಿಲ್ಲ ಎಂದು ಹೇಳುತ್ತಾರೆ. ಆ ಸಮಯದಲ್ಲಿ ನಾವೆಲ್ಲರೂ ಜನತಾ ಮನೆಯಲ್ಲಿ ವಾಸ ಇದ್ದೇವು ಎಂದರೆ ಸರಿಯಲ್ಲ. ಸಾಕ್ಷಿ ನನ್ನ ತಂದೆ ಮತ್ತು ನಾವು ಮಾತ್ರ ವಾಸ ಇದ್ದೇವು ಎಂದು ಹೇಳುತ್ತಾರೆ. ನಾವೆಲ್ಲರೂ ವಾದಿ ಸೇರಿ ಜನತಾ ಮನೆಯಲ್ಲಿ ವಾಸ ಇದ್ದೇವು ಎಂದರೆ ಸರಿಯಲ್ಲ. ನಾವು ಹುಟ್ಟಿದ್ದಾಗಿನಿಂದ ಜನತಾ ಮನೆಯಲ್ಲಿ ವಾಸ ಇದ್ದೇವೆ. ನಮ್ಮ ಮೂಲ ಮನೆಯಲ್ಲಿ ವಾಸ ಇರಲಿಲ್ಲ. ನಾವೆಲ್ಲರೂ ಮೂಲ ಮನೆಯಲ್ಲಿ ವಾಸ ಇದ್ದು ನಂತರ ಜನತಾ ಮನೆಗೆ ಹೋದೇವು ಎಂದರೆ ಸರಿಯಲ್ಲ.

ನನ್ನ ತಂದೆ ಚಿಕ್ಕ ವಯಸ್ಸಿನಲ್ಲಿಯೇ ಮನೆ ಬಿಟ್ಟು ಹೋಗಿರುತ್ತಾರೆ ಎಂದು, ನನ್ನ ತಕರಾರಿನಲ್ಲಿ ಸುಳ್ಳು ತಿಳಿಸಿರುತ್ತೇನೆ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿಯ ಮಗ ಲೋಹಿತ್ ಇವನಿಗೆ ನಾನು ಈ ದಾವೆ ದಾಖಲಾದ ನಂತರ ರೂ.5 ಲಕ್ಷ ಸಾಲ ಕೊಟ್ಟಿದ್ದೇನೆ ಎಂದರೆ ಸರಿ. 2 ನೇ ಪ್ರತಿವಾದಿ ನಮ್ಮ ಪರವಾಗಿ ಸಾಕ್ಷಿ ಹೇಳ ಬೇಕೆಂದು ಆಮೀಶ ಒಡ್ಡಿ ಆ ರೀತಿ ಹಣ ಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿ ದಿನಾಂಕಃ03-03-2021 ರಂದು ಸಾಕ್ಷಿ ಹೇಳಿದ ಕಾರಣ ನಾನು ವಾಪಸ್ಸು ಹಣ ಕೇಳಿದೆನು ಎಂದರೆ ಸರಿಯಲ್ಲ. ನಾನು ಮತ್ತು ಲೋಹಿತ್ ಒಂದೇ ಕಡೆ ವಾಸ ಇದ್ದೇವು, ಆತ ಮದುವೆಯಾಗಿದ್ದು ಮತ್ತು ಬೇರೆ ಕಡೆ ಸಾಲ ಮಾಡಿಕೊಂಡ ಕಾರಣ ನಾನು ಹಣ ನೀಡಿದ್ದು, ಅದನ್ನು ವಾಪಸ್ಸು ಕೇಳಿದಾಗ ಈ ರೀತಿ ಸಾಕ್ಷಿ ಹೇಳಿರುತ್ತಾರೆ ಎಂದು ಹೇಳುತ್ತಾರೆ.

ಕೋಡಿಹಳ್ಳಿ ಗ್ರಾಮದ ಜಮೀನನ್ನು ನಾವು ಪಾಲು ಮಾಡಿಕೊಂಡಾಗ ನಾನು 7 ನೇ ತರಗತಿಯಲ್ಲಿ ಓದುತ್ತಿದ್ದೆನು. ನಾನು 1990 ರಲ್ಲಿ ಹುಟ್ಟಿರುತ್ತೇನೆ. ನಾನು ಶಾಲೆಗೆ ಬೇಗ ಸೇರಿರುತ್ತೇನೆ. ಆ ಕಾರಣದಿಂದ ನನ್ನ ಶಾಲಾ ದಾಖಲೆಗಳಲ್ಲಿ ವ್ಯತ್ಯಾಸ ಇರುತ್ತದೆ. 1992 ರಲ್ಲಿ ಮತ್ತು 1994 ನನ್ನ ತಂಗಿ ಹುಟ್ಟಿರುತ್ತಾರೆ. ನಾವು ಅಲ್ಪವಯಿ ಇದ್ದರೂ ಏಕೆ ಪಾಲುವಿಭಾಗ 1999 ರಲ್ಲಿ ಮಾಡಿಕೊಂಡೀರಿ ಎಂದರೆ ಸಾಕ್ಷಿ ನನ್ನ ತಾಯಿಯ ತಂದೆ ಕೊಡಿಸಿದ ಜಮೀನು ಇದ್ದು, ನನ್ನ ಅಜ್ಜನ ಆಸೆಯ ಪ್ರಕಾರ ನಮಗೆ ಈ ಜಮೀನನ್ನು ಪಾಲು

ಮಾಡಿಕೊಟ್ಟಿರುತ್ತಾರೆ ಮತ್ತು 1999 ರಲ್ಲಿ ನನ್ನ ಅತ್ತೆಯವರ ಮದುವೆಯಾದ ನಂತರ, ಅಜ್ಜ ಮುರಿಗೆಪ್ಪ, ನನ್ನ ಚಿಕ್ಕಪ್ಪ ಮತ್ತು ನನ್ನ ತಂದೆ ಸಹ ಅವರ ಕುಟುಂಬದಲ್ಲಿ ಪಾಲು ಮಾಡಿಕೊಂಡ ಕಾರಣ, ಆಸ್ತಿಗಳು ಪ್ರತ್ಯೇಕ ಆಗಲಿ ಎಂದು ಪಾಲುವಿಭಾಗ ನನ್ನ ತಂದೆ ಮಾಡಿಕೊಟ್ಟಿರುತ್ತಾರೆ. ಈ ವಿಷಯವನ್ನು ನಮ್ಮ ತಕರಾರಿನಲ್ಲಿ ತಿಳಿಸಿಲ್ಲ ಎಂದರೆ ಸರಿ. ಕೋಡಿಹಳ್ಳಿ ಜಮೀನು ವಾದಿಗೆ ಸಿಗಬಾರದು ಎಂಬ ದುರದ್ದೇಶದಿಂದ ನನ್ನ ತಂದೆ ನಮ್ಮ ಹೆಸರಿಗೆ ಮಾಡಿದರು ಎಂದರೆ ಸರಿಯಲ್ಲ.

ಸದರಿ ಜಮೀನನ್ನು ಒಟ್ಟು ಕುಟುಂಬದ ಆದಾಯದಿಂದ ಒಟ್ಟು ಕುಟುಂಬಕ್ಕಾಗಿ ಖರೀದಿ ಮಾಡಿದ್ದು ಎಂದರೆ ಸರಿಯಲ್ಲ. ಸಾಕ್ಷಿ ನನ್ನ ತಂದೆ ತನ್ನ ಸ್ವಂತ ಆದಾಯದಿಂದ ಮತ್ತು ನನ್ನ ತಾಯಿಯ ತಂದೆಯ ಸಹಾಯದಿಂದ ಖರೀದಿ ಮಾಡಿದ್ದು ಎಂದು ಹೇಳುತ್ತಾರೆ. ನನ್ನ ತಂದೆ ಒಟ್ಟು ಕುಟುಂಬ ಬಿಟ್ಟು ಹೋಗಿಲ್ಲ ಮತ್ತು ಸ್ವಂತ ದುಡಿಮೆ ಮಾಡಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆ ತಾಯಿಗೆ ಸಹೋದರ, ಸಹೋದರಿಯರು ಸಹಾಯ ಮಾಡಲು ಈ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪ್ರತಿವಾದಿ 2 ಮತ್ತು 4 ರ ಪರ ವಕೀಲರು ಮೇಲಿನ ಪಾಟೀ ಸವಾಲನ್ನೇ ಅಳವಡಿಸಿಕೊಂಡಿರುತ್ತಾರೆ.**

**ಮರುವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾ. ದಲ್ಲಿ ಸಾಕ್ಷಿ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪಡಿಸಿದೆ).

ಓ ಹೇ ಕೇ ಸರಿ ಇದೆ.

ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ, ಹರಿಹರ.